Depositions

ಅ.ದಾ. ಸಂಖ್ಯೆ:- 9/15
ಪಿಡಬ್ಲ್ಯೂ:-1

ದಿನಾಂಕಃ 06.01.2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ ಡಿ ಸಿ ವಕೀಲರಿಂದ.

ಸ ನಂ 115 ರ ಪಕ್ಕ ಸ ನಂ 116 ಮತ್ತು 117 ಬರುತ್ತದೆ ಎಂದರೆ ಸರಿ . ಸ ನಂ 117 ಸೊಪ್ಪಿನ ಬೆಟ್ಟ ಬರುತ್ತದೆ ಎಂದರೆ ಸರಿ . ಸನಂ 116 ರಲ್ಲಿ ಕೆರೆ ಬರುತ್ತದೆ ಎಂದರೆ ಸರಿ .ಸ ನಂ 116 ರಲ್ಲಿರುವ ಕೆರೆಯ ನೀರನ್ನು ಸುತ್ತ ಮುತ್ತಲಿನ ಕಾಡು ಪ್ರಾಣಿಗಳಿಗೆ ನೀರು ಕುಡಿಯಲು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಕೆರೆಯನ್ನು ನಾವೇ ನಮ್ಮ ಬಳಕೆಗೆ ಮಾಡಿಕೊಂಡಿರುತ್ತೇವೆ. ಸ ನಂ 115 ರಲ್ಲಿ ಕೆರೆ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿದ ಕ್ರಯ ಪತ್ರದಲ್ಲಿ ಸ ನಂ 115 ರಲ್ಲಿ ಕೆರೆ ಇರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸ ನಂ 115 ರಲ್ಲಿರುವ ಕೆರೆಯು ಸರ್ಕಾರಿ ಕೆರೆ ಆಗಿರುವುದಿಲ್ಲ. ಕೆರೆ ಇರುವ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಸ ನಂ 116 ರಲ್ಲಿ ಕೆರೆ ಬರುತ್ತದೆ ಎಂದು ನಮೂದು ಇರುವುದು ಸರಿ .

ಸ ನಂ 117 ರಲ್ಲಿ ದೇವಸ್ಥಾನ ಇರುತ್ತದೆ. ಆ ದೇವಸ್ಥಾನಕ್ಕೆ ಹೋಗಲು ಎಲ್ಲಾ ಕಡೆ ಬರುತ್ತದೆ. ನಮ್ಮ ಜಮೀನಿನ ಮೂಲಕ ದೇವಸ್ಥಾನಕ್ಕೆ ಹೋಗಲು ನಮ್ಮಿಂದ ಯಾವುದೇ ತಕರಾರು ಇರುವುದಿಲ್ಲ. ಸ ನಂ 115 ರಲ್ಲಿ ಅಡಿಗೆ ಮಾಡುವ ಕೊಟ್ಟಿಗೆ ಇರುತ್ತದೆ. ನಾನು ಖರೀದಿ ಮಾಡುವಾಗ ಸದರಿ ಸ ನಂ ನಲ್ಲಿ ಯಾವುದೇ ಕೊಟ್ಟಿಗೆ ಇರುವುದಿಲ್ಲ. ಸ ನಂ 115 ರಲ್ಲಿರುವ ತಂತಿ ಬೇಲಿಯನ್ನು ದಾವಾ ಸಲ್ಲಿಸುವ ಮೊದಲೇ ಮಾಡಿರುತ್ತೇನೆ. ಸದರಿ ಸ ನಂ ನಲ್ಲಿ ಹಾಕಿರುವ ತಂತಿ ಬೇಲಿಯನ್ನು ದಾವೆ ಸಲ್ಲಿಸಿದ ನಂತರ ನಾನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬೇಲಿಯನ್ನು ಪ್ರತಿವಾದಿ ಕೀಳಲು ಪ್ರಯತ್ನ ಪಟ್ಟಿದ್ದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸ ನಂ 115 ರಲ್ಲಿರುವ ಬೇಲಿಯು ಹೊಸ ಬೇಲಿ ಎಂದರೆ ಸರಿಯಲ್ಲ. ನಾನು ಸ ನಂ 115 ಮತ್ತು 117 ನ್ನು ಸೇರಿಸಿ ಒಟ್ಟಾಗಿ ಬೇಲಿ ಹಾಕಿರುತ್ತೇನೆ ಎಂದರೆ ಸರಿ .

ಪ್ರತಿವಾದಿಗಳು ಹಾಗೂ ಅಲ್ಲಿನ ಸ್ಥಳೀಯರು ದೇವಸ್ಥಾನಕ್ಕೆ ಹೋಗಬಾರದೆಂದು ತೊಂದರೆ ಕೊಡುವ ಉದ್ದೇಶದಿಂದ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ತಾಯಿಗೆ ಸ ನಂ 117 ರಲ್ಲಿ ಸರ್ಕಾರದಿಂದ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ 1 ನೇ ಪ್ರತಿವಾದಿ ಹಾಗೂ ಆತನ ಕುಟುಂಬಸ್ಥರು ಮಂಜೂರಾತಿಯನ್ನು ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಲಯ ಅರಣ್ಯಾಧಿಕಾರಿಗಳು ಮತ್ತು ತಹಶೀಲ್ದಾರ್ ಅವರಿಗೆ ಪ್ರತಿವಾದಿಗಳು ಹಾಗೂ ಸ್ಥಳೀಯರು ನಾನು ಸ ನಂ 117 ನ್ನು ಸೇರಿಸಿ ಅಕ್ರಮವಾಗಿ ಒತ್ತುವರಿ ಮಾಡಿದ ಕಾರಣ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ, ನಾನು ಸ ನಂ 117 ರಲ್ಲಿ ಒತ್ತು ಮಾಡಿದ್ದರೂ ಸಹಾ ನ್ಯಾಯಾಲಯ ಮುಂದೆ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಾವೆಯನ್ನು ವಜಾ ಮಾಡುವುದರಿಂದ ನನಗೆ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರಿ ಕೆರೆಗೆ ಪಂಪ್ ಸೆಟ್ ಅಳವಡಿಸಿ ನೀರನ್ನು ಬಳಸಿಕೊಳ್ಳುತಿದ್ದೇನೇಂದರೆ ಸಾಕ್ಷಿ ಮುಂದುವರೆದು ಮೊದಲಿನಿಂದಲೂ ಅದನ್ನು ಬಳಸುತ್ತಿದ್ದೇನು ಎಂದು ನುಡಿದಿರುತ್ತಾರೆ. ನಾನು ಕೆರೆಯ ನೀರನ್ನು ಬಳಸುವುದಕ್ಕೆ ತಹಶೀಲ್ದಾರ್ ಅವರಿಂದ ಸಮ್ಮತಿಯನ್ನು ಪಡೆದಿರುವುದಿಲ್ಲ. ನಾನು ಸ ನಂ 117 ರ ಸರ್ಕಾರಿ ಭೂಮಿಯನ್ನು ಒತ್ತು ವರಿ ಮಾಡಿ ಬೇಲಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ.

ಎರಡನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು,
ತೀರ್ಥಹಳ್ಳಿ

Depositions